# Telephone Conversation between PM and Prime Minister of Ireland

April 22, 2020

---

## ಪ್ರಧಾನ  ಮಂತ್ರಿ ಮತ್ತು ಐರ್ಲೆಂಡ್ನ ಪ್ರಧಾನ  ಮಂತ್ರಿ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 22, 2020

ಪ್ರಧಾನ ಮಂತ್ರಿ ಶ್ರೇಷ್ಠ ಡಾ. ಲಿಯೋ ವರದಕರ್, ಐರ್ಲೆಂಡ್ನ ಪ್ರಧಾನ ಮಂತ್ರಿಯೊಂದಿಗೆ ಇಂದು ದೂರವಾಣಿ ಕರೆಯ ಸಂದರ್ಭದಲ್ಲಿ ಕೋವಿಡ್ -19 ಸಾಂಕ್ರಾಮಿಕ ರೋಗದ ಸ್ಥಿತಿ ಹಾಗೂ ಆರೋಗ್ಯ ಮತ್ತು ಆರ್ಥಿಕ ಪರಿಣಾಮವನ್ನು ನಿಯಂತ್ರಿಸಲು ಎರಡು ದೇಶಗಳು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಚರ್ಚಿಸಿದರು.

ಐರ್ಲೆಂಡ್‌ನಲ್ಲಿ ಸೋಂಕಿನ ವಿರುದ್ಧ ಹೋರಾಡುವಲ್ಲಿ ಭಾರತೀಯ ಮೂಲದ ವೈದ್ಯರು ಮತ್ತು ನರ್ಸ್ ವಹಿಸುತ್ತಿರುವ ಪಾತ್ರವನ್ನು ಪ್ರಧಾನ ಮಂತ್ರಿ ವರದಕರ್ ಪ್ರಶಂಸಿಸಿದರು. ಐರ್ಲೆಂಡ್ನಲ್ಲಿರುವ ಭಾರತೀಯ ನಾಗರಿಕರಿಗೆ ಕಾಳಜಿ ಮತ್ತು ಬೆಂಬಲವನ್ನು ನೀಡಿದ್ದಕ್ಕಾಗಿ ಪ್ರಧಾನ ಮಂತ್ರಿ ವರದಕರ್ ರವರಿಗೆ ಪ್ರಧಾನ ಮಂತ್ರಿಯವರು ಧನ್ಯವಾದ ತಿಳಿಸಿದರು ಹಾಗೂ ಭಾರತದಲ್ಲಿ ಐರಿಶ್ ನಾಗರಿಕರಿಗೆ ಇದೇ ರೀತಿ ಅನುಕೂಲ ಕಲ್ಪಿಸುವುದಾಗಿ ಭರವಸೆ ನೀಡಿದರು.

ಸಾಂಕ್ರಾಮಿಕ ರೋಗದ ವಿರುದ್ಧ ಜಾಗತಿಕ ಹೋರಾಟಕ್ಕೆ ಕೊಡುಗೆ ನೀಡಲು ಭಾರತ ಮತ್ತು ಐರ್ಲೆಂಡ್ ಔಷಧೀಯ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದು ಎಂದು ಇಬ್ಬರು ನಾಯಕರು ಒಪ್ಪಿಕೊಂಡರು. ಕೋವಿಡ್ ನಂತರದ ಸಂದರ್ಭದಲ್ಲಿ ಐರ್ಲೆಂಡ್‌ನೊಂದಿಗೆ, ಮತ್ತು ಯುರೋಪ್ ನೊಂದಿಗೆ ಭಾರತದ ಸಹಕಾರವನ್ನು ಬಲಪಡಿಸುವ ಸಾಮರ್ಥ್ಯದ ಬಗ್ಗೆಯೂ ಅವರು ಚರ್ಚಿಸಿದರು.

ನಾಯಕರು ಸಂಪರ್ಕದಲ್ಲಿರಲು ಮತ್ತು ಬಿಕ್ಕಟ್ಟಿನ ವಿಕಾಸದ ಆಯಾಮಗಳ ಬಗ್ಗೆ ಪರಸ್ಪರ ಸಮಾಲೋಚಿಸಲು ಒಪ್ಪಿದರು.

**ನವ ದೆಹಲಿ**
**ಏಪ್ರಿಲ್ 22, 2020**

DISCLAIMER: This is an approximate translation. The original is available in English on MEA’s website and may be referred to as the official press release.